**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ.**

**ಸಿ.ಸಿ.ನಂಃ 212/2020**

| | | |
|---|---|---|
| ಪಿರ್ಯಾರ್ದುದಾರಃ | 1. | ಕರ್ನಾಟಕ ಸರ್ಕಾರದ ಪರ<br>ಜೇವರ್ಗಿ ಪೋಲಿಸರು |
| | | ವಿರುಧ್ಧ |
| ಆರೋಪಿತರು | 27. | ಮಲ್ಲಪ್ಪ ತಂದೆ ಬಸಪ್ಪ ನಾಟಿಕರ್,<br>ವಃ 28 ವರ್ಷ, ಉಃ ಒಕ್ಕಲುತನ,<br>ವಾಸಃ ಆಂದೋಲಾ, ತಾಃ ಜೇವರ್ಗಿ, ಜಿಃ ಕಲಬುರಗಿ. |
| | 38. | ಕರಣಪ್ಪ ತಂದೆ ಸಿದ್ದಪ್ಪ<br>ವಃ 26 ವರ್ಷ, ಉಃ ಒಕ್ಕಲುತನ,<br>ವಾಸಃ ಆಂದೋಲಾ, ತಾಃ ಜೇವರ್ಗಿ, ಜಿಃ ಕಲಬುರಗಿ. |

**ದೋಷಾರೋಪಣೆ**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್‌ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 20-02-2015ರಂದು ರಾತ್ರಿ ಬೆಳಿಗ್ಗೆ 9-00ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಆಂದೋಲಾ ಗ್ರಾಮದ (ಮುಸ್ಲಿಂ ಬಸ್ತಿ) ಟಿಪ್ಪು ಸುಲ್ತಾನ ಚೌಕ್ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ 27 ಮತ್ತು 38ನೇ ಆರೋಪಿತರಾದ ನೀವು ಇತರೆ ಆರೋಪಿತರ ಜೊತೆಗೂಡಿ ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡು ಬಂದು ಹೊಲದ ವಿಚಾರವಾಗಿ ಚಾಸಾ-1 ಮತ್ತು 4 ರಿಂದ 6ರವರ ಜೊತೆ ಜಗಳ ತೆಗೆದು ಗಲಾಟೆ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, 27 ಮತ್ತು 38ನೇ ಆರೋಪಿತರಾದ ನೀವು ಇತರೆ ಆರೋಪಿತರ ಜೊತೆಗೂಡಿ ಅಪರಾಧ ಎಸಗುವ ಏಕೋದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಮೇಲೆ ತಿಳಿಸಿದ ವಿಚಾರವಾಗಿ ಚಾಸಾ-1 ಮತ್ತು 4 ರಿಂದ 6ರವರೊಂದಿಗೆ

ಜಗಳ ತೆಗೆದು ಅಕ್ರಮಕೂಟದ ಉದ್ದೇಶದ ಸಾಧನೆಗಾಗಿ ದೊಂಬಿ ಉಂಟು ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, 27 ಮತ್ತು 38ನೇ ಆರೋಪಿತರಾದ ನೀವು ಇತರೆ ಆರೋಪಿತರ ಜೊತೆಗೂಡಿ ಅಪರಾಧ ಎಸಗುವ ಏಕೋದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ-1 ಮತ್ತು 4 ರಿಂದ 6ರವರೊಂದಿಗೆ ಜಗಳ ತೆಗೆದು, ಆರೋಪಿತರಾದ ನೀವು ಏ ತುರ್ಕ ಸೂಳಿ ಮಕ್ಕಳೇ ನಮ್ಮ ಸಮಾಜದ ಹುಡುಗಿಯರಿಗೆ ಚುಡಾಯಿಸುತ್ತೀರಿ ನಿಮಗೆ ಬುರ್ಕಾ ಹರಿದು ಎಳೆದಾಡಿ ಹಡುತ್ತೇವೆ ಎಂದು ಕೇಕೇ ಹಾಕುತ್ತಾ ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ ಅವಮಾನವನ್ನುಂಟು ಮಾಡಿ ಚಾಸಾ-1 ಮತ್ತು 4 ರಿಂದ 6ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಅವರನ್ನು ಉದ್ರೇಕಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, 27 ಮತ್ತು 38ನೇ ಆರೋಪಿತರಾದ ನೀವು ಇತರೆ ಆರೋಪಿತರ ಜೊತೆಗೂಡಿ ಅಪರಾಧ ಎಸಗುವ ಏಕೋದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಮೇಲೆ ಹೇಳಿದ ವಿಚಾರವಾಗಿ ಚಾಸಾ-1 ಮತ್ತು 4 ರಿಂದ 6ರವರೊಂದಿಗೆ ಜಗಳ ತೆಗೆದು, ಆರೋಪಿತರಾದ ನೀವು ಚಾಸಾ-1 ಮತ್ತು 4 ರಿಂದ 6ರವರಿಗೆ ಹೊಡೆ ಬಡಿ ಮಾಡಿ ಕಾಲಿನಿಂದ ಚಾಸಾ-1 ಮತ್ತು 4 ರಿಂದ 6ರವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, 27 ಮತ್ತು 38ನೇ ಆರೋಪಿತರಾದ ನೀವು ಇತರೆ ಆರೋಪಿತರ ಜೊತೆಗೂಡಿ ಅಪರಾಧ ಎಸಗುವ ಏಕೋದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಮೇಲೆ ಹೇಳಿದ ವಿಚಾರವಾಗಿ ಚಾಸಾ-1 ಮತ್ತು 4 ರಿಂದ 6ರವರೊಂದಿಗೆ ಜಗಳ ತೆಗೆದು, ಆರೋಪಿತರಾದದ ನೀವು ಚಾಸಾ-1 ಮತ್ತು 4 ರಿಂದ 6ರವರಿಗೆ ಬೆಂಕಿ ಹಚ್ಚಿ ಸುಡುತೀವಿ ಎಂದು ಜೀವದ ಬೆದರಿಕೆ ಹಾಕಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ

ಕಲಂ.149ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸ್ಥಳಃ ಜೇವರ್ಗಿ (ಶ್ರೀಮತಿ ತಯ್ಯಬಾ ಸುಲ್ತಾನಾ)
ದಿಃ 04-04-2026 ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ.</u>**

**ಸಿ.ಸಿ.ನಂಃ 212/2020**

| | | |
|---|---|---|
| ಪಿರ್ಯಾರ್ದುದಾರಃ | 1. | ಕರ್ನಾಟಕ ಸರ್ಕಾರದ ಪರ<br>ಜೇವರ್ಗಿ ಪೋಲಿಸರು |
| | | ವಿರುದ್ಧ |
| ಆರೋಪಿ | 27. | ಮಲ್ಲಪ್ಪ ತಂದೆ ಬಸಪ್ಪ ನಾಟಿಕರ್,<br>ವಃ 28 ವರ್ಷ, ಉಃ ಒಕ್ಕಲುತನ,<br>ವಾಸಃ ಆಂದೋಲಾ, ತಾಃ ಜೇವರ್ಗಿ, ಜಿಃ ಕಲಬುರಗಿ. |

**ದೋಷಾರೋಪಣೆ**

ಪ್ರಶ್ನೆ.1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ:-

ಪ್ರಶ್ನೆ.2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ಈ ದಿನ ದಿಃ 04-04-2026 ದೃಢೀಕರಿಸುತ್ತೇನೆ.

ಸ್ಥಳಃ ಜೇವರ್ಗಿ
ದಿಃ 04-04-2026

(ಶ್ರೀಮತಿ ತಯ್ಯಬಾ ಸುಲ್ತಾನಾ)
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ.</u>**

**ಸಿ.ಸಿ.ನಂಃ 212/2020**

ಪಿರ್ಯಾರ್ದುದಾರಃ 1. ಕರ್ನಾಟಕ ಸರ್ಕಾರದ ಪರ
ಜೇವರ್ಗಿ ಪೋಲಿಸರು

ವಿರುದ್ಧ

ಆರೋಪಿ 38. ಕರಣಪ್ಪ ತಂದೆ ಸಿದ್ದಪ್ಪ
ವಃ 26 ವರ್ಷ, ಉಃ ಒಕ್ಕಲುತನ,
ವಾಸಃ ಆಂದೋಲಾ, ತಾಃ ಜೇವರ್ಗಿ, ಜಿಃ ಕಲಬುರಗಿ.

**ದೋಷಾರೋಪಣೆ**

ಪ್ರಶ್ನೆ.1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ:-

ಪ್ರಶ್ನೆ.2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ಈ ದಿನ ದಿಃ 04-04-2026 ದೃಢೀಕರಿಸುತ್ತೇನೆ.

ಸ್ಥಳಃ ಜೇವರ್ಗಿ (ಶ್ರೀಮತಿ ತಯ್ಯಬಾ ಸುಲ್ತಾನಾ)
ದಿಃ 04-04-2026 ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ